# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 843 |
| ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.07.2023 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಇತ್ತೀಚೆಗೆ ಅವ್ಯಾಹತವಾಗಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ಗಮನಕ್ಕೆ ಬಂದಿರುತ್ತದೆ.<br><br>**ಅಕ್ರಮ ಮರಳು ಸಾಗಾಣಿಕೆ ಕುರಿತು ಸರ್ಕಾರ ಕೈಗೊಂಡ ಕ್ರಮ:**<br><br>• ಅಕ್ರಮ ಮರಳುಗಾರಿಕೆ ನಡೆಯದಂತೆ ಅಧೀನ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಲಾಗಿರುತ್ತದೆ.<br>• ಅಕ್ರಮ ಮರಳು ಸಾಗಾಣಿಕೆ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು ಅಕ್ರಮ ಮರಳು ಸಾಗಾಣಿಕೆ ಮಾಡುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುವುದು.<br>• ಅಕ್ರಮ ಮರಳು ಸಾಗಾಟವನ್ನು ತಡೆಗಟ್ಟಲು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚಿಸಲಾಗಿರುತ್ತದೆ.<br>• ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಹಾಗೂ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ತನಿಖಾ ತಂಡಗಳನ್ನು ರಚಿಸಿಕೊಂಡು ಅಕ್ರಮ ಮರಳು ಸಾಗಾಟ ಮಾಡುವವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ.<br>• ಸಂಬಂಧಪಟ್ಟ ಇಲಾಖೆಗಳ ಕಣ್ಣು ತಪ್ಪಿಸಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದು, ಅಕ್ರಮ ಮರಳು ಸಾಗಾಣಿಕೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗುತ್ತಿದೆ.<br>• ಈ ಕುರಿತಂತೆ ಹಗಲು ಮತ್ತು ರಾತ್ರಿ ಗಸ್ತಿನ ಸಮಯದಲ್ಲಿ ಸಂಶಯಿತ ವಾಹನಗಳ ಪರಿಶೀಲನೆ ನಡೆಸಲಾಗುತ್ತಿದೆ.<br>• ಅಕ್ರಮ ಮರಳು ಸಾಗಾಣಿಕೆ/ಗಣಿಗಾರಿಕೆಯ ಕುರಿತು ಗುಪ್ತ ಮಾಹಿತಿ ಕಲೆ ಹಾಕುವಂತೆ ಠಾಣಾಧಿಕಾರಿಗಳಿಗೆ, ಬೀಟ್ ಸಿಬ್ಬಂದಿಗಳಿಗೆ ಹಾಗೂ ಗುಪ್ತ ಮಾಹಿತಿ ಸಿಬ್ಬಂದಿಗಳಿಗೆ ಸೂಚಿಸಲಾಗಿರುತ್ತದೆ. |

<table>
<tr>
<td>ಆ</td>
<td>ರಾಜ್ಯದಲ್ಲಿ ಅಕ್ರಮ ಮರಳು ಸಾಗಾಣಿಕೆ ಬಗ್ಗೆ ಎಷ್ಟು ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ; (ಸಂಪೂರ್ಣವಾಗಿ ವಿವರ ನೀಡುವುದು)</td>
<td>ರಾಜ್ಯದಲ್ಲಿ ಅಕ್ರಮ ಮರಳು ಸಾಗಾಣಿಕೆ ಬಗ್ಗೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳ ವರ್ಷವಾರು ವಿವರ ಕೆಳಗಿನಂತಿರುತ್ತವೆ.
<table>
<tr><th>ಕ್ರಸ</th><th>ವರ್ಷ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>2020</td><td>1748</td></tr>
<tr><td>2</td><td>2021</td><td>1376</td></tr>
<tr><td>3</td><td>2022</td><td>1270</td></tr>
<tr><td>4</td><td>2023 (ಜೂನ್)</td><td>697</td></tr>
<tr><td></td><td>ಒಟ್ಟು</td><td>5091</td></tr>
</table>
ವರ್ಷವಾರು ಅಂಕಿ-ಅಂಶಗಳ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.</td>
</tr>
<tr>
<td>ಇ</td>
<td>ಅಕ್ರಮ ಮರಳು ಸಾಗಾಣಿಕೆ ತಡೆಯಲು ಹೋದ ಎಷ್ಟು ಪೊಲೀಸ್ ಸಿಬ್ಬಂದಿಗಳು ಮೃತರಾಗಿದ್ದಾರೆ; ಹಲ್ಲೆಗೊಳಗಾದವರ ಸಂಖ್ಯೆ ಎಷ್ಟು;(ವಿವರ ನೀಡುವುದು)</td>
<td>ಅಕ್ರಮ ಮರಳು ಸಾಗಾಣಿಕೆ ತಡೆಯಲು ಹೋದ ಪೊಲೀಸ್ ಸಿಬ್ಬಂದಿಗಳು ಮೃತರಾದ ಹಾಗೂ ಹಲ್ಲೆಗೊಳಗಾದವರ ಸಂಖ್ಯೆ ಈ ಕೆಳಗಿನಂತಿದೆ.
<table>
<tr><th>ಕ್ರಸ</th><th>ಘಟಕ</th><th>ಹಲ್ಲೆಗೊಳಗಾದವರ ಸಂಖ್ಯೆ</th><th>ಮೃತಗೊಂಡವರ ಸಂಖ್ಯೆ</th></tr>
<tr><td>1</td><td>ಕಲಬುರಗಿ ನಗರ</td><td>1</td><td>0</td></tr>
<tr><td>2</td><td>ಚಿಕ್ಕಬಳ್ಳಾಪುರ</td><td>2</td><td>0</td></tr>
<tr><td>3</td><td>ಕೊಡಗು</td><td>1</td><td>0</td></tr>
<tr><td>4</td><td>ಚಿತ್ರದುರ್ಗ</td><td>1</td><td>0</td></tr>
<tr><td>5</td><td>ಕಲಬುರಗಿ ಜಿಲ್ಲೆ</td><td>10</td><td>1</td></tr>
<tr><td></td><td>ಒಟ್ಟು</td><td>15</td><td>1</td></tr>
</table></td>
</tr>
<tr>
<td>ಈ</td>
<td>ಮೃತ ಸಿಬ್ಬಂದಿ ಕುಟುಂಬಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ;(ಅಂಕಿ ಅಂಶಗಳೊಂದಿಗೆ ಮಾಹಿತಿ ನೀಡುವುದು)</td>
<td>ಕಲಬುರಗಿ ಜಿಲ್ಲೆಯಲ್ಲಿ ಅಕ್ರಮ ಮರಳು ಸಾಗಾಣಿಕೆ ತಡೆಯಲು ಹೋಗಿ ಮೃತಪಟ್ಟಿದ್ದು, ಮೃತಗೊಂಡ ದಿ॥ ಮೈಸೂರ, ಸಿಹೆಚ್‌ಸಿ-33, ನೆಲೋಗಿ ಪೊಲೀಸ್ ಠಾಣೆ, ಕಲಬುರಗಿ ಜಿಲ್ಲೆ ಇವರ ಕುಟುಂಬದವರಿಗೆ ಪರಿಹಾರ ಧನವನ್ನು ನೀಡಲಾಗಿದೆ. ಮಾಹಿತಿ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರಸ</th><th>ಬ್ಯಾಂಕ್/ ಇನ್ಸೂರೆನ್ಸ್</th><th>ನೀಡಲಾದ ಪರಿಹಾರ ಧನ (ಲಕ್ಷ ರೂಗಳಲ್ಲಿ)</th></tr>
<tr><td>1</td><td>ಅನುಗ್ರಹ ಪೂರ್ವಕ</td><td>30.00</td></tr>
<tr><td>2</td><td>ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್</td><td>20.00</td></tr>
<tr><td>3</td><td>ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರವರ ಪೊಲೀಸ್ ಸ್ಯಾಲರಿ ಪ್ಯಾಕೆಜ್ (ಓರಿಯೆಂಟಲ್ ಇನ್ಸೂರೆನ್ಸ್)</td><td>50.00</td></tr>
</table>
1. ಅನುಗ್ರಹ ಪೂರ್ವಕ ಪರಿಹಾರ ಧನ (ರೂ.30.00 ಲಕ್ಷಗಳು):-<br>
ದಿ॥ ಮೈಸೂರ ಸಿಹೆಚ್‌ಸಿ-33 ನೆಲೋಗಿ ಪೊಲೀಸ್ ಠಾಣೆ ಕಲಬುರಗಿ ಜಿಲ್ಲೆ ರವರು ಅಕ್ರಮ ಮರಳು ಸಾಗಾಣಿಕೆ ತಡೆಯಲು ಹೋಗಿ</td>
</tr>
</table>

| | | |
|---|---|---|
| | | ಮೃತಪಟ್ಟಿರುವುದರಿಂದ ಸದರಿ ರವರ ಕುಟುಂಬದವರಿಗೆ ರೂ.30.00 ಲಕ್ಷಗಳ ಅನುಗ್ರಹ ಪೂರ್ವಕ ಪರಿಹಾರ ಧನವನ್ನು ಮಂಜೂರು ಮಾಡಲಾಗಿದೆ.<br><br>**2. ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ (ರೂ.20.00 ಲಕ್ಷಗಳು):-**<br><br>ದಿ॥ ಮೈಸೂರ ಸಿಹೆಚ್‌ಸಿ-33 ನೆಲೋಗಿ ಪೊಲೀಸ್ ಠಾಣೆ ಕಲಬುರಗಿ ಜಿಲ್ಲೆ ಇವರ ಕುಟುಂಬದವರಿಗೆ ರೂ.20.00 ಲಕ್ಷಗಳು ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಪರಿಹಾರ ಧನವನ್ನು ಪಾವತಿಸಲು ಪ್ರಸ್ತಾವನೆಯನ್ನು ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಬೆಂಗಳೂರು ರವರಲ್ಲಿ ಮಂಜೂರಾತಿಗಾಗಿ ಸಲ್ಲಿಸಲಾಗಿದೆ.<br><br>**3. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರವರ ಪೊಲೀಸ್ ಸ್ಯಾಲರಿ ಪ್ಯಾಕೆಜ್ (ಓರಿಯೆಂಟಲ್ ಇನ್ಸೂರೆನ್ಸ್) (ರೂ.50.00 ಲಕ್ಷಗಳು):-**<br><br>ದಿ॥ ಮೈಸೂರ, ಸಿಹೆಚ್‌ಸಿ-33, ನೆಲೋಗಿ ಪೊಲೀಸ್ ಠಾಣೆ, ಕಲಬುರಗಿ ಜಿಲ್ಲೆ ಇವರ ಕುಟುಂಬದವರಿಗೆ ರೂ.50.00 ಲಕ್ಷಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರವರ ಪೊಲೀಸ್ ಸ್ಯಾಲರಿ ಪ್ಯಾಕೆಜ್ (ಓರಿಯೆಂಟಲ್ ಇನ್ಸೂರೆನ್ಸ್) ಪರಿಹಾರ ಧನವನ್ನು ಪಾವತಿಸಲು ಪ್ರಸ್ತಾವನೆಯನ್ನು ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಬೆಂಗಳೂರು ರವರಲ್ಲಿ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. |
| ಉ | ಅಕ್ರಮ ಮರಳುಗಾರಿಕೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಿಸುವುದು) | **ಅಕ್ರಮ ಮರಳುಗಾರಿಕೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮ:**<br>• ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುವಂತಹ ಸ್ಥಳಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ನಿರ್ಮಿಸಿ ಕರ್ತವ್ಯಕ್ಕೆ ಅಧಿಕಾರಿ / ಸಿಬ್ಬಂದಿಯವರನ್ನು ನೇಮಕ ಮಾಡಲಾಗುತ್ತಿದೆ.<br>• ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಮಾಸಿಕ ಅಪರಾಧ ಸಭೆಗಳಲ್ಲಿ ಮತ್ತು ವರ್ಚುಯಲ್ ಮೀಟಿಂಗ್‌ಗಳಲ್ಲಿ ಹಾಗೂ ಜ್ಞಾಪನ ಪತ್ರಗಳ ಮುಖೇನ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿರುತ್ತದೆ.<br>• ಅಕ್ರಮ ಮರಳು ಸಾಗಾಣಿಕೆ ಮಾಡುವ ಕುರಿತು ಮಾಹಿತಿ ಸಂಗ್ರಹಿಸಿ ದಾಳಿ ಕೈಗೊಂಡು ಚಾಲಕ ಹಾಗೂ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಅಕ್ರಮ ಮರಳು ಸಾಗಾಣಿಕೆ ಪ್ರಕರಣಗಳಲ್ಲಿ ಭಾಗಿಯಾದ ವ್ಯಕ್ತಿಗಳ ವಿರುದ್ಧ ರೌಡಿ ಹಾಳೆಗಳನ್ನು ತೆರೆದು, ಸದರಿಯವರ ಚಲನವಲನಗಳ ಮೇಲೆ ನಿಗಾ ಇಡಲಾಗುತ್ತಿದೆ.<br>• ಮುಂಜಾಗ್ರತಾ ಕ್ರಮಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಬಾಂಡ್ ಓವರ್ ಆದ ಪ್ರಕರಣಗಳಲ್ಲಿ ಷರತ್ತುಗಳನ್ನು ಉಲ್ಲಂಘಿಸಿದ ವ್ಯಕ್ತಿಗಳ ಆಸ್ತಿ ಮುಟ್ಟುಗೋಲಿಗೆ ಸಂಬಂಧಪಟ್ಟ ತಾಲ್ಲೂಕು ದಂಡಾಧಿಕಾರಿಗಳಿಗೆ ವರದಿ ಸಲ್ಲಿಸಲಾಗುತ್ತಿದೆ. |

| | | |
|---|---|---|
| | | • ಅಕ್ರಮ ಮರಳು ಸಾಗಾಣಿಕೆ ತಡೆಗಟ್ಟಲು ಬಾತ್ಮಿದಾರರು ಮತ್ತು ಬೀಟ್ ಸಿಬ್ಬಂದಿ ನೇಮಿಸಿದ್ದು, ಮಾಹಿತಿ ಸಂಗ್ರಹಿಸಲು ಸೂಚಿಸಿರುತ್ತದೆ. ಹೈವೆ ಮೊಬೈಲ್ ಪೆಟ್ರೋಲಿಂಗ್ ಹಾಗೂ ಗುಪ್ತ ಮಾಹಿತಿ ಸಂಗ್ರಹಿಸಿ ಅಕ್ರಮ ಮರಳು ಸಾಗಾಣಿಕೆ ತಡೆಗಟ್ಟಲು ಕ್ರಮವಹಿಸಿದೆ.<br>• ಅಕ್ರಮವಾಗಿ ಮರಳು ಸಾಗಿಸುವ ಲಾರಿ/ಟ್ರಾಕ್ಟರ್‌ಗಳನ್ನು ಅಮಾನತ್ತುಪಡಿಸಿಕೊಂಡು ಗೌರವಾನ್ವಿತ ನ್ಯಾಯಾಲಯಗಳಿಗೆ ಒಪ್ಪಿಸಿರುತ್ತದೆ.<br>• ಬೀಟ್ ಸಿಬ್ಬಂದಿಯವರುಗಳಿಂದ ಮರಳು ಸಾಗಿಸುವ ಸ್ಥಳಗಳ ವಿವರಗಳನ್ನು ಪಡೆದುಕೊಳ್ಳುತ್ತಿದ್ದು, ಪಿಎಸ್‌ಐ ರವರುಗಳು ಠಾಣಾ ವ್ಯಾಪ್ತಿಯಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುವ ಸ್ಥಳಗಳಿಗೆ ಆಗಿಂದಾಗ್ಗೆ ಅನಿರೀಕ್ಷಿತವಾಗಿ ಭೇಟಿ ನೀಡಿ, ಅಕ್ರಮ ಮರಳು ಗಣಿಗಾರಿಕೆಯಲ್ಲಿ ನಿರತರಾಗಿರುವ ವ್ಯಕ್ತಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುತ್ತಿರುತ್ತಾರೆ.<br>• ಅಕ್ರಮ ಮರಳು ಸಾಗಾಣಿಕೆ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿತರ ವಿರುದ್ಧ ಮುಂಜಾಗ್ರತ ಕ್ರಮವಾಗಿ ಪಿ.ಎ.ಆರ್.ಗಳನ್ನು ದಾಖಲಿಸಲಾಗುತ್ತಿದೆ ಮತ್ತು ಗಡಿಪಾರು ಮಾಡಲಾಗುತ್ತಿದೆ.<br>• ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ನದಿ ಪಾತ್ರದ ಗ್ರಾಮಗಳಿಗೆ ಸಿಬ್ಬಂದಿಯವರಿಗೆ ಪಿಕೆಟಿಂಗ್ ಕರ್ತವ್ಯಕ್ಕೆ ನೇಮಿಸಲಾಗುತ್ತಿದೆ. ಈ ಮೊದಲು ಅಕ್ರಮ ಮರಳು ಸಾಗಾಟದಲ್ಲಿ ಭಾಗಿಯಾದವರನ್ನು ಕರೆಸಿ ಸೂಕ್ತ ಎಚ್ಚರಿಕೆ ನೀಡಲಾಗಿದೆ. |

ಹೆಚ್‌ಡಿ 326 ಎಸ್‌ಎಸ್‌ಟಿ 2023

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

**ಅನುಬಂಧ-**

ರಾಜ್ಯದಲ್ಲಿ ಅಕ್ರಮ ಮರಳು ಸಾಗಾಣಿಕೆ ಬಗ್ಗೆ ದಾಖಲಾದ ಪ್ರಕರಣಗಳ ಅಂಕಿ-ಅಂಶ

| ಕ್ರಸ | ಘಟಕಗಳು | 2020 | 2021 | 2022 | 2023 |
|---|---|---|---|---|---|
| 1. | ಬೆಂಗಳೂರು ನಗರ | 3 | 1 | 0 | 0 |
| 2. | ಮೈಸೂರು ನಗರ | 0 | 1 | 0 | 0 |
| 3. | ಹುಬ್ಬಳ್ಳಿ-ಧಾರವಾಡ ನಗರ | 0 | 0 | 0 | 0 |
| 4. | ಮಂಗಳೂರು ನಗರ | 65 | 45 | 31 | 6 |
| 5. | ಬೆಳಗಾವಿ ನಗರ | 0 | 0 | 0 | 0 |
| 6. | ಕಲಬುರಗಿ ನಗರ | 9 | 6 | 0 | 0 |
| 7. | ಬೆಂಗಳೂರು ಜಿಲ್ಲೆ | 0 | 1 | 0 | 0 |
| 8. | ತುಮಕೂರು ಜಿಲ್ಲೆ | 77 | 68 | 49 | 26 |
| 9. | ಕೋಲಾರ ಜಿಲ್ಲೆ | 0 | 0 | 0 | 0 |
| 10. | ರಾಮನಗರ ಜಿಲ್ಲೆ | 40 | 13 | 10 | 2 |
| 11. | ಚಿಕ್ಕಬಳ್ಳಾಪುರ ಜಿಲ್ಲೆ | 35 | 13 | 13 | 4 |
| 12. | ಕೆ.ಜಿ.ಎಫ್. | 0 | 0 | 0 | 0 |
| 13. | ಮೈಸೂರು ಜಿಲ್ಲೆ | 134 | 143 | 45 | 15 |
| 14. | ಮಂಡ್ಯ ಜಿಲ್ಲೆ | 49 | 28 | 18 | 5 |
| 15. | ಹಾಸನ ಜಿಲ್ಲೆ | 49 | 39 | 48 | 38 |
| 16. | ಕೊಡಗು ಜಿಲ್ಲೆ | 26 | 8 | 9 | 1 |
| 17. | ಚಾಮರಾಜನಗರ ಜಿಲ್ಲೆ | 23 | 2 | 5 | 2 |
| 18. | ಬೆಳಗಾವಿ ಜಿಲ್ಲೆ | 54 | 24 | 25 | 14 |
| 19. | ವಿಜಯಾಪುರ ಜಿಲ್ಲೆ | 23 | 51 | 21 | 12 |
| 20. | ಧಾರವಾಡ ಜಿಲ್ಲೆ | 2 | 0 | 0 | 0 |
| 21. | ಬಾಗಲಕೋಟೆ ಜಿಲ್ಲೆ | 62 | 20 | 6 | 6 |
| 22. | ಗದಗ ಜಿಲ್ಲೆ | 11 | 0 | 43 | 10 |
| 23. | ಚಿತ್ರದುರ್ಗ ಜಿಲ್ಲೆ | 117 | 51 | 20 | 28 |
| 24. | ಹಾವೇರಿ ಜಿಲ್ಲೆ | 71 | 37 | 61 | 25 |
| 25. | ಶಿವಮೊಗ್ಗ ಜಿಲ್ಲೆ | 36 | 41 | 11 | 33 |
| 26. | ದಾವಣಗೆರೆ ಜಿಲ್ಲೆ | 78 | 65 | 57 | 55 |
| 27. | ದಕ್ಷಿಣ ಕನ್ನಡ ಜಿಲ್ಲೆ | 8 | 7 | 3 | 0 |
| 28. | ಉತ್ತರ ಕನ್ನಡ ಜಿಲ್ಲೆ | 0 | 0 | 0 | 0 |
| 29. | ಚಿಕ್ಕಮಗಳೂರು ಜಿಲ್ಲೆ | 77 | 33 | 18 | 6 |
| 30. | ಉಡುಪಿ ಜಿಲ್ಲೆ | 5 | 0 | 0 | 1 |
| 31. | ಬಳ್ಳಾರಿ ಜಿಲ್ಲೆ | 76 | 33 | 56 | 28 |
| 32. | ಕಲಬುರಗಿ ಜಿಲ್ಲೆ | 182 | 215 | 120 | 87 |
| 33. | ಬೀದರ್ ಜಿಲ್ಲೆ | 0 | 1 | 0 | 0 |
| 34. | ರಾಯಚೂರು ಜಿಲ್ಲೆ | 93 | 172 | 234 | 141 |
| 35. | ಕೊಪ್ಪಳ ಜಿಲ್ಲೆ | 91 | 35 | 163 | 43 |
| 36. | ಯಾದಗಿರಿ ಜಿಲ್ಲೆ | 128 | 102 | 58 | 50 |
| 37. | ವಿಜಯನಗರ ಜಿಲ್ಲೆ | 124 | 121 | 146 | 59 |
| | **ಒಟ್ಟು** | **1748** | **1376** | **1270** | **697** |